ಶ್ರೀ ಎಚ್. ವಿಶ್ವನಾಥಯ್ಯ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ೮೫ ಮತ್ತು ೮೬ನೇ ಸಾಲಿಗೆ ಸಂಬಂಧಪಟ್ಟ ಬಡ್ಡಿ ರಿಯಾಯ್ತಿಯನ್ನು ಪಾವತಿ ಮಾಡಿದ್ದೇವೆ. ೮೬-೮೭ನೇ ಸಾಲಿಗೆ ಭಾಗಶಃ ಮಾಡಬೇಕಾಗಿದೆ. ಮಾನ್ಯ ಸದಸ್ಯರು ಹೇಳಿದರು ಏನೆಂದರೆ ಜಿಲ್ಲಾ ಕೇಂದ್ರ ಬ್ಯಾಂಕ್‌ಗಳು ಮತ್ತು ಅದಕ್ಕೆ ಮೇಲ್ಪಟ್ಟ ಸಹಕಾರ ಸಂಘಗಳು ಈ ಬಡ್ಡಿ ರಿಯಾಯ್ತಿ ಹೊರಯನ್ನು ಹೊರುವುದಕ್ಕೆ ಸಾಧ್ಯವಿಲ್ಲವೆಂದರೆ ಪ್ರಾಥಮಿಕ ಸಹಕಾರ ಸಂಘಗಳಿಗೂ ಸಾಧ್ಯವಿಲ್ಲ. ಇದ್ದುದರಲ್ಲಿ ಅವರ ಪರಿಸ್ಥಿತಿ ಚೆನ್ನಾಗಿ ಇರುವುದರಿಂದ ೮೭-೮೮ರದ್ದು ಅವರೇ ಅದನ್ನು ಭರಿಸಬೇಕು ಎಂಬ ಸೂಚನೆಯನ್ನು ಕೊಡುತ್ತೇನೆ.

ಸರ್ಕಾರಿ ಸ್ಥಳಗಳನ್ನು ಸೂಳ್ಯ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿಯವರು ಅನುಭವಿಸುತ್ತಿರುವ ವಿಚಾರ

೧೪೬೨. ಕೆ. ಕುಶಾಲ (ಸೂಳ್ಯ).—ಮಾನ್ಯ ಕಂದಾಯ, ಯೋಜನಾ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸೂಳ್ಯ ತಾಲ್ಲೂಕಿನಲ್ಲಿ ಸರಕಾರಿ ಜಮೀನನ್ನು ಆಗ್ಮೆ ಮಾಡಿ ಅನುಭವಿಸಿಕೊಂಡು ಬರುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಖ್ಯೆ ಎಷ್ಟು ?

ಆ) ಸದ್ರಿ ಆಗ್ಮೆದಾರರುಗಳ ಪೈಕಿ ಇಲಾಖೆ ಗ್ರಾಮವಾರು ರಿಕಾರ್ಡು ತಯಾರಿಸಿದ ಪ್ರಕರಣಗಳೆಷ್ಟು ? ಬಾಕಿ ಇರುವ ಪ್ರಕರಣಗಳೆಷ್ಟು ? ಬಾಕಿ ಇರಲು ಕಾರಣಗಳೇನು ?

ಇ) ೧೯೮೬ರಲ್ಲಿ ಸೂಳ್ಯ ತಾಲ್ಲೂಕಿನಾದ್ಯಂತ ಆಗ್ಮೆದಾರರ ಸಮ್ಮೇಳನದಂತೆ ಕಂದಾಯ ಸಚಿವರಿಗೆ ಸಲ್ಲಿಸಿದ ಮನವಿಯಂತೆ ಆಗ್ಮೆದಾರರ ಸಂಖ್ಯೆ ಎಷ್ಟು ? ರಿಕಾರ್ಡು ತಯಾರಿಸಲು ಇನ್ನು ಬಾಕಿಯಿರುವ ಪ್ರಕರಣಗಳೆಷ್ಟು ? ಈ ಕಾರಿತು ಸಂಪೂರ್ಣ ರಿಕಾರ್ಡು ತಯಾರಿಸಲು ಸರ್ಕಾರದವರು ಏನಾದರೂ ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್. ಆರ್. ಜೊಮ್ಮಾಯಿ (ಕಂದಾಯ, ಯೋಜನಾ ಮತ್ತು ಮಧ್ಯಮ ನೀರಾವರಿ ಸಚಿವರು).—

ಅ) ಸೂಳ್ಯ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನನ್ನು ಆಗ್ಮೆ ಮಾಡಿದ (ಅತಿಕ್ರಮಣ ಮಾಡಿದ) ಪರಿಶಿಷ್ಟ ಜಾತಿ ಸಂಖ್ಯೆ ೫೩೭ ಮತ್ತು ಪರಿಶಿಷ್ಟ ಪಂಗಡ ಸಂಖ್ಯೆ-೨೯೪.

ಆ) ೮೩೦ ಪ್ರಕರಣಗಳಲ್ಲಿ ರಿಕಾರ್ಡು ತಯಾರಿಸಲಾಗಿದೆ. ರಿಕಾರ್ಡು ತಯಾರಿಸಲು ಯಾವುದೇ ಪ್ರಕರಣಗಳು ಬಾಕಿಯಿರುವುದಿಲ್ಲ.

ಇ) ಆಗ್ಮೆದಾರರ (ಅತಿಕ್ರಮಣ) ಸಂಖ್ಯೆ ೭೫೪. ಸದ್ರಿ ಮನವಿಯಲ್ಲಿ ಹೇಳಿದ ಎಲ್ಲಾ ಪ್ರಕರಣಗಳಲ್ಲಿ ರಿಕಾರ್ಡು ತಯಾರಿಸಲಾಗಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಕುಶಾಲ.—ಅಧ್ಯಕ್ಷರೇ, 'ಇ' ಪ್ರಶ್ನೆಗೆ ಉತ್ತರ ಸಮರ್ಪಕ ಇಲ್ಲ, ತಮಗೆ ಗೊತ್ತಿರುವಂತೆ ಎರಡು ಸಾವಿರಕ್ಕೂ ಮಿಕ್ಕ ಅತಿಕ್ರಮಣದಾರರು ತಮ್ಮ ನಾಯಕರ ಮುಖಾಂತರ ತಮ್ಮ ಕಛೇರಿಯಲ್ಲಿ ಮನವಿಯನ್ನು ಸಲ್ಲಿಸಿದ್ದಾರೆ. ನಾನು 'ಇ' ಪ್ರಶ್ನೆಯಲ್ಲಿ ಹಿಂದುಳಿದ ವರ್ಗದವರ ರಿಕಾರ್ಡುಗಳನ್ನು ಎಷ್ಟು ತಯಾರಿಸಲು ಬಾಕಿ ಇವೆ ಎಂದು ಕೇಳಿದ್ದೆ. ಅದಕ್ಕೆ ಉತ್ತರವಾಗಿ ೭೫೪ ಎಂದು ಹೇಳಿದ್ದಾರೆ. ನಿಜವಾಗಿಯೂ ೨ ಸಾವಿರಕ್ಕೂ ಹೆಚ್ಚು ಮನವಿದಾರರು ತಮಗೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಈಗ ೮೩೦ ಪ್ರಕರಣಗಳಲ್ಲಿ ರಿಕಾರ್ಡುಗಳನ್ನು ತಯಾರಿಸಲಾಗಿದೆ ಎಂದರೆ ಇನ್ನು ೧೩೦೦ ಪ್ರಕರಣಗಳು ಬಾಕಿ ಇವೆ ಎಂದಾಯಿತ . ಇದರಲ್ಲಿ ತಮ್ಮ ಮೂಲಕ ಜಿಲ್ಲಾಧಿಕಾರಿ ಕಛೇರಿಗೆ, ತಾಲ್ಲೂಕು ಕಛೇರಿಗೆ ಹೋಗಿ ಆ ಮೇಲೆ ಗ್ರಾಮಕರಣಿಕರ ಕಚೇರಿಗಳಲ್ಲಿ ಹೋಗಿ ರೆಕಾರ್ಡ್‌ಗಳನ್ನು ತೆಗೆಸಲಿಕ್ಕೆ ಬಾಕಿ ಇದೆ. ಕೆಲವು ಶ್ರೀಮಂತ ವರ್ಗದ ಜನರು ಈ ರೆಕಾರ್ಡುಗಳನ್ನು ತೆಗೆಸಲಿಕ್ಕೆ ಬಿಡದೇ ಇರುವುದರಿಂದ ಗ್ರಾಮಕರಣಿಕರ ಕಚೇರಿಯಲ್ಲಿ ಬಡರೈತರು ಅಲೆದಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಪ್ರಶ್ನೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸಂಬಂಧಪಟ್ಟಿದ್ದರಿಂದ, ಆ ಅಂಕಿಸಂಖ್ಯೆ ಕೊಟ್ಟಿದ್ದೇನೆ. ಇದರಲ್ಲಿ ಹಿಂದುಳಿದ ವರ್ಗದವರ ಸಂಖ್ಯೆ ಸೇರಿಲ್ಲ. ನಾನು ಈಗಾಗಲೇ ಬರೆದಿದ್ದೇನೆ. ಈ ವಿಷಯವಾಗಿ ಇನ್ನು ಏನಾದರೂ ಉಳಿದಿದ್ದರೆ, ಆದಷ್ಟು ಬೇಗ ರೆಕಾರ್ಡ್ ತರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು.—ಪ್ರ. ಸಂ. ೭೧೦(೨೨೦೯) (ಮಾನ್ಯ ಸದಸ್ಯರು ಹಾಜರಿರಲಿಲ್ಲ) ೨೮ನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆ ಸಂಖ್ಯೆ ೫೦೮ (೧೭೪೫) ಶ್ರೀ ಆರ್. ರಾಮಯ್ಯನವರ ಪ್ರಶ್ನೆಯನ್ನು ಮುಂದೂಡಲಾಗಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಉಡುಪಿ ಶಿವಳ್ಳಿನೇಕಾರರ ಸಹಕಾರ ಸಂಘದಲ್ಲಿ ನಡೆಯುತ್ತಿರುವ ದುರಾಡಳಿತದ ಬಗ್ಗೆ

೨೨೫೭. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).— ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಡುಪಿ ಶಿವಳ್ಳಿನೇಕಾರರ ಸಹಕಾರ ಸಂಘದಲ್ಲಿ ನಡೆಯುತ್ತಿರುವ ದುರಾಡಳಿತವು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಾದಲ್ಲಿ ಸರ್ಕಾರವು ಸಂಘದಲ್ಲಿನ ದುರಾಡಳಿತವನ್ನು ನಿಯಂತ್ರಿಸಲು ಹಾಲಿ ಇರುವ ಆಡಳಿತ ಮಂಡಲಿಯನ್ನು ರದ್ದುಗೊಳಿಸಿ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸುವುದೇ ?

ಶ್ರೀ ಆರ್. ಬಿ. ಪೋತ್‌ದಾರ್ (ಕೈಗಾರಿಕಾ ಮತ್ತು ಸಹಕಾರ ಸಚಿವರು).—

ಅ) ಬಂದಿದೆ.

ಆ) ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ನಿವಾಸದ ಶಂಖು ಸ್ಥಾಪನೆ

೨೨೦೯. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ಕಂದಾಯ ಯೋಜನಾ ಮಂತ್ರಿ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ಜಿಲ್ಲಾಧಿಕಾರಿಗಳವರ ನಿವಾಸದ ಶಂಖು ಸ್ಥಾಪನೆಯಾದದ್ದು ಯಾವಾಗ,

ಆ) ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರು ಯಾರ್ಯಾರು ; ಹಾಕಲಾದ ಶಿಲಾಶಾಸನದಲ್ಲಿರುವ ಹೆಸರುಗಳು ಯಾವುವು ; (ವಿವರ ನೀಡುವುದು).

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಚಿಕ್ಕಮಗಳೂರು ಜಿಲ್ಲಾಧಿಕಾರಿಗಳವರ ನಿವಾಸದ ಶಂಖು ಸ್ಥಾಪನೆಯನ್ನು ದಿನಾಂಕ ೨೮-೧೧-೧೯೮೭ರಂದು ನೆರವೇರಿಸಲಾಯಿತು.

ಆ) ಈ ಶಂಕುಸ್ಥಾಪನಾ ಕಾರ್ಯಕ್ರಮದಲ್ಲಿ ಅಂದಿನ ಲೋಕೋಪಯೋಗಿ ಸಚಿವರಾದ ಶ್ರೀ ಹೆಚ್.ಡಿ. ದೇವೆಗೌಡರು ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಶಿಲಾನ್ಯಾಸ ಫಲಕದಲ್ಲಿ ಶ್ರೀ ಹೆಚ್. ಡಿ. ದೇವೆಗೌಡ, ಮಾನ್ಯ ಲೋಕೋಪಯೋಗಿ ಸಚಿವರು, ಶ್ರೀ ಎನ್. ವೆಂಕಟೇಶ ಪ್ರಸಾದ್, ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ, ಬೆಂಗಳೂರು, ಶ್ರೀ ಡಿ. ಹೆಚ್. ಮಲ್ಲಿಕಾರ್ಜುನಯ್ಯ ಸೂಪರಿಂಟೆಂಡೆಂಟ್ ಇಂಜಿನಿಯರ್, ಹಾಸನ ಹಾಗೂ ಶ್ರೀ ಪಿ. ಆರ್. ರಾಧಕೃಷ್ಣರೆಡ್ಡಿ, ಚಿಕ್ಕಮಗಳೂರು, ಇವರುಗಳ ಹೆಸರುಗಳನ್ನು ನಮೂದಿಸಲಾಗಿದೆ